ನಿಯಮ ೩೩ಳಿರ ಮೇರೆಗೆ

ಬೆಂಗಳೂರು ಮಾಗಡಿ ರಸ್ತೆಯಲ್ಲಿರುವ ಸರ್ಕಾರದ ಕುಷ್ಠ ರೋಗದ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಸಂಬಂಧಪಟ್ಟ ದೂರಿನ ಬಗ್ಗೆ.

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅಧ್ಯಕ್ಷರೇ, ಬೆಂಗಳೂರು ಮಾಗಡಿ ರಸ್ತೆಯಲ್ಲಿರುವ ಸರ್ಕಾರದ ಕುಷ್ಠ ರೋಗದ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಸಂಬಂಧಪಟ್ಟ ದೂರಿಗೆ, ಬೆಂಗಳೂರಿನಲ್ಲಿರುವ ಸಿ.ಓ.ಡಿ ಪೋಲೀಸ್ ಇನ್ಸ್‌ಪೆಕ್ಟರ್, ಹಾಗೂ ತನಿಖಾಧಿಕಾರಿಯಾದ ಶ್ರೀ ಮತ್ತೂರನಕರ್, ಎಂಬುವರು ಬೇಕೆಂದೇ ನಿಜವನ್ನು ಮುಚ್ಚಿ, ಸಂಬಂಧವಿಲ್ಲದ ವಿಷಯವನ್ನು ಸೇರಿಸಿ, ಅಪರಾಧಿಗೆ ಸಹಾಯ ಮಾಡುವ ರೀತಿಯಲ್ಲಿ ಸಿ. ಓ. ಡಿ.ಯ ಸುಳ್ಳು ರಿಪೋರ್ಟ್‌ನ್ನು ದಿನಾಂಕ ೨೯-೪-೧೯೫೫ನೇ ತಾರೀಖಿನಲ್ಲಿ ಗೃಹಸಚಿವಾಲಯದ ಕಾರ್ಯದರ್ಶಿಯವರಿಗೆ ಒಪ್ಪಿಸಿರುತ್ತದೆ. ಈ ವರದಿಯಲ್ಲಿ ಸಾಕ್ಷಿದಾರರುಗಳ ಹೇಳಿಕೆಯನ್ನು ಸೇರಿಸಲೇ ಇಲ್ಲ. ಆದುದರಿಂದ ಸ್ವೀಕರಿಸಿರುವ ಸಾಕ್ಷಿ ದಾರರ ಹೇಳಿಕೆಯ ಮೇಲೆ ಈಗ ಏಕೆ ಅಪರಾಧಿಗಳನ್ನು ಬಂಧಿಸಬಾರದು ಎಂದು ಕೇಳುತ್ತೇನೆ. ಇಂತಹ ಪಕ್ಷಪಾತವುಳ್ಳ ಸಿ. ಓ.ಡಿ. ರಿಪೋರ್ಟ್‌ನ್ನು ಹೇಗೆ ಸರ್ಕಾರ ಒಪ್ಪಿಕೊಂಡು ಸುಮ್ಮನೆ ಇರುತ್ತದೆ ? ಸುಳ್ಳು ಮಾಹಿತಿಯನ್ನು ಕೊಟ್ಟ ವಿಚಾರಣಾಧಿಕಾರಿಗೆ ದಂಡನೆ ಇಲ್ಲವೇ ? ದೂರು ಕೊಟ್ಟವರಿಗೆ ನ್ಯಾಯವಿಲ್ಲವೇ ? ಇದಕ್ಕೆ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಯವರು ಈ ಸಭೆಗೆ ವಿವರವಾಗಿ ತಿಳಿಸಲು ಕೋರುತ್ತೇನೆ. ಜೊತೆಗೆ ಸಿ. ಓ. ಡಿ. ಇಲಾಖೆಯ ಬಗ್ಗೆ ತನಿಖೆ ಮಾಡಲು ಒಂತ್ರೊಂದು ಸಿ. ಓ. ಡಿ. ಇಲಾಖೆಯನ್ನು ಏತಕ್ಕೆ ರಚಿಸಬಾರದು ಎಂದು ನಾನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನೇನೊ ಕೆಲವು ಗಂಭೀರವಾದ ವಿಚಾರಗಳನ್ನು ಎತ್ತಿದ್ದಾರೆ, ಅವು ಗಂಭೀರ ಸ್ವರೂಪದ ವಿಚಾರಗಳು ಇರುವುದರಿಂದ ಅದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನಾವು ತೆಗೆದುಕೊಂಡು ಈ ಸಿ.ಓ.ಡಿ. ಬಗ್ಗೆ ಇನ್ನೂ ಉನ್ನತ ಮಟ್ಟದಲ್ಲಿ ವಿಚಾರ ಮಾಡಬೇಕೆಂದು ಈಗಾಗಲೇ ನಾವು ಕ್ರಮ ತೆಗೆದುಕೊಂಡಿದ್ದೇವೆ.

೨) ಪುತ್ತೂರು ತಾಲ್ಲೂಕಿನ ಸುಬ್ರಹ್ಮಣ್ಯ ವಿಭಾಗದ ಕರ್ನಾಟಕ ಅರಣ್ಯ ರಬ್ಬರ್ ನಿಗಮ, ನಿಯಮಿತ ಇಲ್ಲಿಯ ರಬ್ಬರು ತೋಟಗಳಲ್ಲಿ ಬೆಂಕಿಯಿಂದ ಸುಟ್ಟು ಹೋಗಿರುವ ಬಗೆ

ಶ್ರೀ ಕೆ. ಕುಶಾಲ (ಸೂಳ್ಯ).— ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲಾ ಸುಳ್ಯ ವಿಧಾನ ಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಸುಬ್ರಹ್ಮಣ್ಯ ವಿಭಾಗದ ಕರ್ನಾಟಕ ಅರಣ್ಯ ರಬ್ಬರ್ ನಿಗಮ, ನಿಯಮಿತ ಇಲ್ಲಿಯ ರಬ್ಬರು ತೋಟಗಳಲ್ಲಿ ಬೆಂಕಿಯಿಂದ ಸುಟ್ಟು ಹೋಗಿ ಸುಮಾರು ೧೫೦ ಹೆಕ್ಟೇರು ರಬ್ಬರು ತೋಟದ ಮರಗಳು ನಾಶವಾದುದು ತಿಳಿದುಬರುತ್ತಿದೆ. ಈ ರಬ್ಬರು ತೋಟಗಳಿಗೆ ಬೆಂಕಿ ಹಿಡಿದು ಕೊಳ್ಳಲು ಸುಬ್ರಮಣ್ಯ ರಬ್ಬರ್ ತೋಟದ ವಿಭಾಗೀಯ ವ್ಯವಸ್ಥಾಪಕರಾದ ಶ್ರೀ ಬುಧಿಹಾಳ ಹಾಗೂ ಫಾರೆಸ್ಟ್ ಅಧಿಕಾರಿ ಪ್ರಸನ್ನ ಎಂಬುವರ ಬೇಜವಾಬ್ದಾರಿಯೇ ಕಾರಣವಾಗಿದೆ. ರಬ್ಬರು ಕೃಷಿ ಕಾರ್ಮಿಕರು ಸುಮಾರು ೨೫ ಜನರನ್ನು ದಸ್ತಗಿರಿ ಮಾಡಿರುವರು. ಈ ವಿಭಾಗದ ರಬ್ಬರು ತೋಟಕ್ಕೆ ೧೯೬೦ ಜನವರಿ ೧ನೇ ತಾರೀಖಿನಿಂದ ೨೭ರವರೆಗೆ ಬೆಂಕಿ ಕಾವಲುಗಾರರನ್ನು ನೇಮಿಸಿ ಸಂಬಳವನ್ನು ಕೊಡುತ್ತಿರುವ ದಾಖಲೆ ಇದ್ದರೂ ಸಹ ಬೆಂಕಿ ಕಾವಲುಗಾರರು ಕೇವಲ ೨ ಜನರು ಮಾತ್ರ ಇರುವುದಾಗಿದೆ. ಈ ಸುಳ್ಳು ದಾಖಲೆಯಿಂದ ೨೫ ಜನರ ಹೆಸರಿನಲ್ಲಿ ಸಂಬಳವನ್ನು ವಿಭಾಗೀಯ ವ್ಯವಸ್ಥಾಪಕರು ಹಾಗು ಫಾರೆಸ್ಟರು ಇಬ್ಬರು ಲಪಟಾಯಿಸುತ್ತಿದ್ದಾರೆ. ರಬ್ಬರು ಕಾರ್ಮಿಕರ ಮೇಲೆ ದೂರು ಆರ್ಜಿ ಸಲ್ಲಿಸಿ ಬಂಧಿಸಿ ಪೋಲೀಸ್ ಠಾಣೆಯಲ್ಲಿಡಲಾಗಿದೆ. ಸುಳ್ಳು ದೂರಿನಿಂದ ಬಂದಿತರಾದ ನಿರಪರಾಧಿಗಳನ್ನು ಬಿಡುಗಡೆಗೊಳಿಸುವುದು ಈ ಮೇಲೆ ಹೆಸರಿಸಿದ ಅಧಿಕಾರಿಗಳ ದುರ್ವರ್ತನೆ ಬಗ್ಗೆ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವಂತೆ ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿ ಅರಣ್ಯ ಸಚಿವರು).— ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

ಸುಬ್ರಮಣ್ಯ ರಬ್ಬರ್ ವಿಭಾಗದ ಕರವಾಯಿ ಎನ್ನುವ ಪ್ರದೇಶದಲ್ಲಿ ೧೯೫೫ನೇ ಸಾಲಿನಲ್ಲಿ ೧೨೫ ಹೆಕ್ಟೇರು ರಬ್ಬರ್ ಪ್ಲಾಂಟೇಷನ್ ಬೆಳೆಸಿದೆ. ಈ ಪ್ಲಾಂಟೇಷನ್‌ನಲ್ಲಿ ದಿನಾಂಕ ೨೫-೩-೧೯೬೦ರಂದು ಭಾನುವಾರ ಬೆಳಿಗ್ಗೆ ೧೧-೦೦ ಘಂಟೆಯ ಸಮಯದಲ್ಲಿ ಆಕಸ್ಮಿಕ ಬೆಂಕಿ ಬಿದ್ದು ಸುಮಾರು ೭೦-೭೫ ಹೆಕ್ಟೇರು ರಬ್ಬರ್ ತೋಟವು ನೆಲ ಬೆಂಕಿಯಿಂದ ಸುಟ್ಟಿದೆ.